†ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಮಾಡಿರಬಹುದು.

ಶ್ರೀ ಎಚ್. ಗಂಗಾಧರನ್.—ಅವನು ಬಹಳ ವರ್ಷಗಳಿಂದ ಅದೇ ಮನೆಯನ್ನು ಅವಲಂಬನೆ ಮಾಡಿಕೊಂಡು ಬಂದಿರುವುದರಿಂದ ಬೇರೆ ಮನೆ ಸಿಗುವವರೆಗೂ ಅವಕಾಶ ಮಾಡಿಕೊಡುವುದಕ್ಕೆ ಆಗುವುದಿಲ್ಲವೇ ?

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಅವರೂ ಹರಿಜನರಾಗಿದ್ದರೂ ಸಹ ಕೆಲಸ ಬಿಟ್ಟು ಬೇರೆ ಕಡೆಗೆ ಹೋಗಿರುವುದರಿಂದ, ಇನ್ನು ಸಾಕಷ್ಟು ಹರಿಜನರು ಮನೆಗಳು ಇಲ್ಲದೇ ಇರುವುದರಿಂದ ಅವರಿಗೆ ಆ ಮನೆಯನ್ನು ಕೊಡಿಸಿ ಕೊಡಬೇಕಾಗುತ್ತದೆ. ಆದುದರಿಂದ ಅವರು ಆ ಮನೆಯನ್ನು ಖಾಲಿ ಮಾಡಲೇಬೇಕಾಗುತ್ತದೆ.

ಶ್ರೀ ಎಚ್. ಗಂಗಾಧರನ್.—ಅವರು ಬಹಳ ವರ್ಷಗಳಿಂದ ಪುರಸಭೆಯಲ್ಲಿ ಬಹಳ ಗೌರವವಾಗಿ ಕೆಲಸ ಮಾಡಿಕೊಂಡು ಬಂದಿದ್ದಾನೆ, ಯಾವುದೋ ಕಾರಣದಿಂದ ಕೆಲಸ ಬಿಟ್ಟಿರುತ್ತಾನೆ, ಇಲ್ಲ ರಿಟೈರ್ ಆಗುವ ಸಂದರ್ಭ ಇದ್ದುದರಿಂದಲೋ ಏನೋ ಬಿಟ್ಟಿದ್ದಾನೆ, ಅವನಿಗೆ ಈಗ ರೆಂಟ್ ಕಂಟ್ರೋಲ್‌ನಲ್ಲಿ ಮನೆ ಸಿಗುವುದು ಕಷ್ಟವಿದೆ, ಇಲ್ಲ ಬೇರೆ ಕಡೆ ಮನೆ ಸಿಗುವುದು ಕಷ್ಟವಿರುವುದರಿಂದ, ಅವನಿಗೆ ಬೇರೆ ಮನೆ ಸಿಗುವವರೆಗಾದರೂ ಅಲ್ಲಿ ಇರಲು ವ್ಯವಸ್ಥೆ ಮಾಡಿಕೊಡುತ್ತೀರಾ ಸ್ವಾಮಿ ?

ಶ್ರೀ ಎಚ್.ಸಿ. ಶ್ರೀಕಂಠಯ್ಯ.—ಮಾನ್ಯ ಶ್ರೀ ಗಂಗಾಧರನ್‌ರವರು ಹರಿಜನರ ಬಗ್ಗೆ ಇಷ್ಟೊಂದು ಕಳಕಳಿ ವ್ಯಕ್ತಪಡಿಸುತ್ತಿರುವುದರಿಂದ ಅವರು ಬೇರೆ ಮನೆ ಸಿಗುವವರೆಗೂ ಅವರಿಗೆ ಇರುವುದಕ್ಕೆ ಅವಕಾಶ ಮಾಡಿಕೊಡಬಹುದು.

ಶ್ರೀ ಟಿ. ಬಿ. ಜಯಚಂದ್ರ.—ಈಗ ತಾವು ಹೇಳಿದ ಸ್ಕೀಮುಗಳು ಎಷ್ಟು ದಿವಸಗಳಲ್ಲಿ ಫಲಕಾರಿಯಾಗುತ್ತವೆ, ಯಾವಾಗ ಕೊಡಿಸುವಂಥ ವ್ಯವಸ್ಥೆ ಮಾಡುತ್ತೀರಿ ?

ಶ್ರೀ ಕೆ. ಎಚ್. ಶ್ರೀನಿವಾಸ್.—ವಿಳಂಬ ಇಲ್ಲದೆ ಅದನ್ನು ಮಾಡುವ ಪ್ರಯತ್ನ ಮಾಡುತ್ತೇನೆ.

Starting a Steel plant at Mangalore

425 SRI S. M. SHEERNALY CHANDRASEKHAR (Hosanagar).—Will the Minister for Industries and Commerce be pleased to state :—

(a) whether Government have come to know that the Government of India propose to start a steel plant at Mangalore ;

(b) if so, whether it is in addition to the one proposed steel plant to be put up at Hospet ;

(c) whether Government is aware of any reasons why the Hospet steel plant is not progressing well ;

(d) whether they are aware of any proposal before the Government of India to drop it;

(e) if not when it is expected to be completed ?

SRI AZEEZ SAIT (Minister for Industries and Commerce).—

(a) Yes.

(b) Can be presumed to be in addition to Hospet.

(c) No.

(d) No.

(e) 6 to 7 years after investment decision is taken and funds allotted.

†ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—ನನ್ನ (ಇ) ಪ್ರಶ್ನೆಗೆ ಇಲ್ಲ ಎಂದು ಹೇಳಿದ್ದೀರಿ. ಪತ್ರಿಕೆಯಲ್ಲಿ ಶ್ರೀಮಾನ್ ಜಾರ್ಜ್ ಫರ್ನಾಂಡಿಸ್ ಅವರ ಹೇಳಿಕೆ ಬಂದಿತ್ತು. ಹೊಸಪೇಟೆ ಉಕ್ಕಿನ ಕಾರ್ಖಾನೆ ಫೀಸಿಬಲ್ ಆಗಿಲ್ಲ, ಏನಾದರೂ ಸಣ್ಣ ಕಾರ್ಖಾನೆ ಮಾಡಬೇಕಾಗಿದೆ, ದೊಡ್ಡ ಕಾರ್ಖಾನೆ ಮಾಡುವುದಕ್ಕೆ ಸಾಧ್ಯವಿಲ್ಲ, ಇದನ್ನು ಪುರ್ನಪರಿಶೀಲನೆ ಮಾಡಬೇಕಾಗಿದೆ ಎಂದು ಹೇಳಿರುವುದು ಪತ್ರಿಕೆಯಲ್ಲಿ ಬಂದಿತ್ತು, ಆದರಮೇಲೆ ನಾನು ಪ್ರಶ್ನೆ ಕೇಳಿರುವುದು. ಇದಕ್ಕೆ ತಾವೇನು ಉತ್ತರ ಕೊಡುತ್ತೀರಿ.

SRI AZEEZ SAIT.—Sir, I remember to have given a reply to a calling Attention Notice either in this House or in Upper House about this question. The position now is changed. Sri Biju Patnaik, Union Minister for Steel when he was in Bangalore recently made it abundantly clear that he is not averse to Hospet Steel Plant. He said the Government of India is finding out the viability and probably he also made an announcement which has come in the newspapers that 3 to 4 million tonnes steel plant would be located in Hospet and also a Steel Plant in Mangalore. This is the position.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—ಸುಮಾರು ೧೯೭೧ನೇ ಇಸವಿಯಲ್ಲಿ ಇದಕ್ಕೆ ಆಗಿನ ಮಹಾ ಪ್ರಧಾನಿಯಾದ ಶ್ರೀಮತಿ ಇಂದಿರಾಗಾಂಧಿಯವರು ಅಡಿಗಲ್ಲನ್ನು ಹಾಕಿದ್ದರು. ಅಲ್ಲಿಂದ ಇಲ್ಲಿಯವರೆಗೆ ಆಗಿರತಕ್ಕ ಕೆಲಸಕಾರ್ಯಗಳ ಪ್ರಗತಿಯನ್ನು ನೋಡಿದರೆ ತಮಗೆ ಇದು ಆಗುತ್ತದೆ ಎನ್ನುವ ಆಶಾ ಭಾವನೆ ಇದೆಯೇ ?

SRI AZEEZ SAIT.—Sir, what the hon. Member has said just now was correct. This project has been dragged on from the year 1971. I can only say that people who were representing our State could have persuaded the Central Government to take up the project early. But whatever it is, it is very difficult to set up a steel project. Because the other requirements and combinations are got to be prepared. So, we have to consider those aspects also. I am still confident that we will get a Steel Plant in some other form in Hospet.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—ಇದುವರೆಗೆ ಹೊಸಪೇಟೆ ಸ್ಟೀಲ್ ಪ್ಲಾಂಟಿಗಾಗಿ ಖರ್ಚು ಮಾಡಿದ ಹಣ ಎಷ್ಟು, ಕೇಂದ್ರ ಸರ್ಕಾರದವರು ಯಾವ ಬಾಬತ್ತಿಗೆ ಖರ್ಚು ಮಾಡಿದ್ದಾರೆ, ಇನ್ನೆಷ್ಟು ಖರ್ಚು ಮಾಡಬೇಕು ?

SRI AZEEZ SAIT.—The total extent of land required for the plant is 9,021 acres. Out of which 7,467 acres have been acquired and the rest of them were Government lands. We have spent nearly Rs. 3.58 crores upto 22-2-1979.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—೫ ಸಾವಿರ ಕೋಟಿ ಖರ್ಚು ಮಾಡತಕ್ಕ ಒಂದು ಯೋಜನೆಗೆ ೧೦ ವರ್ಷಗಳಲ್ಲಿ ೩ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಇನ್ನೂ ಕೂಡ ತಮಗೆ ಕಾರ್ಖಾನೆ ಆಗುತ್ತದೆ ಎನ್ನುವ ನಂಬಿಕೆ ಇದೆಯೇ ?